ಹಕ್ಕು ಪತ್ರಗಳನ್ನು ತಡೆ ಹಿಡಿದಿರುವುದು
390 : (331)

ಶ್ರೀ ಗೋಪಾಲ ಭಂಡಾರಿ .ಹೆಚ್. (ಕಾರ್ಕಳ)

ಅ) ಕಾರ್ಕಳ ತಾಲ್ಲೂಕಿನ ಚಾರಾ ಗ್ರಾಮದ ಸ.ನಂ.105 ರಲ್ಲಿ ಸಾವಿರಾರು ಎಕರೆ ಕಂದಾಯ ಜಮೀನಿದ್ದು, ಅದರಲ್ಲಿ ಅನೇಕ ವರುಷಗಳಿಂದ ಸರ್ಕಾರದಿಂದ ಹಕ್ಕುಪತ್ರ ಪಡೆದು ಸುಮಾರು 800 ಕುಟುಂಬಗಳು ವಾಸಿಸುತ್ತಿರುವುದು ನಿಜವಲ್ಲವೆ;

ಆ) ಈ ಜಮೀನಿನಲ್ಲಿ ಮೂರು ಶಾಲೆಗಳು, ನವೋದಯ ಶಾಲೆ ಇದ್ದರೂ ಕೈತಪ್ಪಿನಿಂದ ಅರಣ್ಯ ಇಲಾಖೆಯ ವನ್ಯಜೀವಿ ಇಲಾಖೆಗೆ ಸೇರಿದೆಂದು ಹಕ್ಕು ಪತ್ರಗಳನ್ನು ತಡೆಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಜಮೀನು ಅರಣ್ಯವಲ್ಲವೆ; ಲೋಕಾಯುಕ್ತರು ಮತ್ತು ಉಚ್ಚ ನ್ಯಾಯಾಲಯ ಆದೇಶ ಮಾಡಿದ ನಂತರವೂ ಮೇಲ್ಮನವಿ ಸಲ್ಲಿಸಲು ಕಾರಣವೇನು;

ಈ) ಅರಣ್ಯ ಇಲಾಖೆಯ ಗಡಿ ವಿಂಗಡಣೆ ಮಾಡಿ ಚಾರಾ ಗ್ರಾಮದ ಜಮೀನು ಅರಣ್ಯ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲವೆಂದು ಅಧಿಕೃತ ಪ್ರಕಟಣೆ ಹೊರಡಿಸಿ ಒಂದು ವರ್ಷವಾದರೂ ಉಚ್ಚ ನ್ಯಾಯಾಲಯದ ಮೇಲ್ಮನವಿಯನ್ನು ಹಿಂತೆಗೆದುಕೊಳ್ಳದಿರಲು ಕಾರಣವೇನು?

ಶ್ರೀ ಕೆ.ಎಸ್. ಈಶ್ವರಪ್ಪ
(ಮಾನ್ಯ ಉಪ ಮುಖ್ಯಮಂತ್ರಿಗಳು (ಕಂದಾಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್)

ಅ) ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಚಾರಾ ಗ್ರಾಮದ ಸ.ನಂ: 105–1 ರಲ್ಲಿ ತಲಾ 0.05 ಎಕ್ರೆಯಂತೆ 244 ಆಶ್ರಯ ಫಲಾನುಭವಿಗಳಿಗೆ ತಹಶೀಲ್ದಾರರು ಕಾರ್ಕಳ ಇವರು ಮನೆನಿವೇಶನ ಮಂಜೂರು ಮಾಡಿದ್ದು. ಗ್ರಾಮದಲ್ಲಿ ಮನೆ ನಿವೇಶನ ಮಂಜೂರಾತಿಗೆ ಯೋಗ್ಯ ಸರಕಾರಿ ಜಮೀನು ಲಭ್ಯವಿಲ್ಲದ ಪ್ರಯುಕ್ತ ಪಹಣಿಯಂತೆ ಈ

ಜಮೀನು ಸರಕಾರಿ ಅನಾಧೀನ ಸ್ಥಳವಾಗಿರುವುದರಿಂದ ತಹಶೀಲ್ದಾರರು ಕಾರ್ಕಳ ಇವರು ಡಿಸೆಂಬರ್–2003 ಹಾಗೂ ಫೆಬ್ರುವರಿ–2004 ರಲ್ಲಿ ಮನೆ ನಿವೇಶನ ಮಂಜೂರು ಮಾಡಿರುತ್ತಾರೆ.

ಸದ್ರಿ ಜಮೀನಿನಲ್ಲಿ ಮರಗಳು ಇರುವ ಸ್ರಯುಕ್ತ ಕಾನೂನಿನಂತೆ ಅವುಗಳ ವಿಲೇವಾರಿಗಾಗಿ ವಲಯ ಅರಣ್ಯಾಧಿಕಾರಿ, ಸೋಮೇಶ್ವರ ಇವರಿಗೆ ತಹಶೀಲ್ದಾರರು ಪತ್ರ ಬರೆಯಲಾಗಿ, ಸದ್ರಿಯವರು ತಮ್ಮ ಪತ್ರ ಸಂ: ಕಸಂ.ಚಾರ 05–061228 ದಿನಾಂಕ: 3–08–2005 ರಂತೆ ಪ್ರಸ್ತಾವಿತ ಮನೆ ನಿವೇಶನ ನೀಡಿದ ಸರಕಾರಿ ಜಮೀನು ಸೋಮೇಶ್ವರ ವನ್ಯಜೀವಿ ವಲಯಕ್ಕೆ ಸೇರಿದ ಬ್ಲಾಕ್ ಆಗಿದ್ದು. ಸದ್ರಿ ಸ್ಥಳವನ್ನು ಅರಣ್ಯೇತರ ಚಟುವಟಿಕೆಗೆ ಬಳಸಿಕೊಳ್ಳಲು ರಾಷ್ಟ್ರೀಯ ವನ್ಯಜೀವಿ ಸಮಿತಿಯ ಪೂರ್ವಾನುಮತಿ ಬೇಕಾಗಿರುತ್ತದೆ ಎಂದೂ, ಅಲ್ಲದೆ ಕರ್ನಾಟಕ ಅರಣ್ಯ ಕಾನೂನು 1969 ನಿಯಮ 41ಕ್ಕೆ ವಿರುದ್ದವಾಗಿರುತ್ತದೆ ಹಾಗೂ ಅರಣ್ಯ ಸಂರಕ್ಷಣಾ ಕಾಯಿದೆ 1980 ರ ನಿಯಮ 2 ರಂತೆ ಕೇಂದ್ರ ಸರಕಾರದ ಪೂರ್ವಾನುಮತಿ ಬೇಕಾಗಿರುವುದಾಗಿ ತಿಳಿಸಿ ಮನೆನಿವೇಶನ ಮಂಜೂರಾತಿಗೆ ಆಕ್ಷೇಪಣೆ ನೀಡಿರುತ್ತಾರೆ.

ಪ್ರಸ್ತಾವಿತ ಜಮೀನು ಅರಣ್ಯ ಜಮೀನೆಂದು ನಿವೇಶನ ಮಂಜೂರಾತಿಯನ್ನು ರದ್ದುಪಡಿಸುವ ಬಗ್ಗೆ ಕಾರ್ಕಳ ತಹಶೀಲ್ದಾರರು ಸಹಾಯಕ ಕಮೀಷನರ್‌ರವರಿಗೆ ಪ್ರಸ್ತಾವನೆ ಸಲ್ಲಿಸಿದ್ದು. ಸಹಾಯಕ ಕಮೀಷನರ್‌ರವರು ತಮ್ಮ ಪತ್ರ ಸಂ: ಸಿಡಿಎಸ್.ಎಲ್‌ಎನ್‌ಡಿ. 94ಸಿ ಸಿಆರ್. 2/2005–06 ದಿನಾಂಕ: 7–11–2005 ರಂತೆ ನಿವೇಶನ ಮಂಜೂರಾತಿ ರದ್ದುಪಡಿಸಲು ನಿರ್ದೇಶಿಸಿರುತ್ತಾರೆ. ಹಾಗೂ ಜಿಲ್ಲಾಧಿಕಾರಿಯವರು ತಮ್ಮ ಪತ್ರ ಎಲ್‌ಎನ್‌ಡಿ.ಎಚ್‌ಎಸ್.30/05–06 ದಿನಾಂಕ 23–01–2006 ರಂತೆ ನಿವೇಶನ ಮಂಜೂರಾತಿ ರದ್ದುಪಡಿಸಲು ಸೂಚಿಸಿರುತ್ತಾರೆ. ಈ ಬಗ್ಗೆ ಮಂಜೂರಾತಿದಾರರಿಗೆ ನೀವೇಶನ ರದ್ದುಪಡಿಸುವ ಬಗ್ಗೆ ದಿನಾಂಕ: 9–10–2006 ರಲ್ಲಿ ನೋಟೀಸು ನೀಡಿ ವಿಚಾರಣೆ ನಡೆಸಿ ದಿನಾಂಕ: 26–10–2006 ರಂದು ತಹಶೀಲ್ದಾರರು ಮಂಜೂರಾತಿ ರದ್ದುಪಡಿಸಿರುತ್ತಾರೆ.

ಸದ್ರಿ ಮಂಜೂರಾತಿ ರದ್ದುಪಡಿಸಿದ ಆದೇಶದ ಮೇಲೆ ಮಂಜೂರಾತಿದಾರರಲ್ಲಿ ಶ್ರೀಮತಿ ಜಲಜ ಪೂಜಾರ್ತಿ ಮತ್ತಿತರರು ರಾಜ್ಯ

ಸರಕಾರ. ಜಿಲ್ಲಾಧಿಕಾರಿ ಉಡುಪಿ. ಸಹಾಯಕ ಕಮೀಷನರು ಕುಂದಾಪುರ. ತಹಶೀಲ್ದಾರರು ಕಾರ್ಕಳ, ವಲಯ ಅರಣ್ಯಾಧಿಕಾರಿ ವನ್ಯಜೀವಿ ವಿಭಾಗ, ಸೋಮೇಶ್ವರ ಇವರನ್ನು ಪ್ರತಿವಾದಿಯನ್ನಾಗಿ ದಾಖಲಿಸಿ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ರಿ.ಪಿ ನಂ: 16509/2006 ದಾಖಲಿಸಿದ್ದು, ಸದ್ರಿ ರಿಟ್ ಪಿಟಿಶನ್‌ನಲ್ಲಿ ದಿನಾಂಕ: 10–06–2009 ರಲ್ಲಿ ತೀರ್ಮಾನವಾಗಿದ್ದು, ರದ್ದುಪಡಿಸಿದ ಮನೆನಿವೇಶನ ಮರುಮಂಜೂರಾತಿಗೆ ಆದೇಶಿಸಲಾಗಿದೆ.

ಸದ್ರಿ ರಿಟ್‌ಪಿಟಿಶನ್ ಆದೇಶದ ವಿರುದ್ಧ ಕಾನೂನುಕೋಶದ ಅಭಿಪ್ರಾಯದ ಮೇರೆಗೆ ಸರಕಾರ ರಿಟ್ ಅಪೀಲು ನಂ: 1772/2010 ರಂತೆ ದಾಖಲಿಸಿದ್ದು. ಪ್ರಸ್ತುತ ಈ ಅಪೀಲು ಬಾಕಿ ಇರುತ್ತದೆ. ಕಾನೂನುಕೋಶದ ಅಭಿಪ್ರಾಯದ ಮೇರೆಗೆ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ರಿಟ್ ಅಪೀಲನ್ನು ದಾಖಲಿಸಿರುವ ಕಾನೂನುಕೋಶದ ಅಭಿಪ್ರಾಯವನ್ನು ಈ ಪತ್ರದೊಂದಿಗೆ ಲಗತ್ತಿಸಿದೆ ಹಾಗೂ ಈ ಅಪೀಲು ಸಲ್ಲಿಸಲು ಸರಕಾರದ ಆದೇಶ ಸಂ: RD 113 :GW 09 (LC) Bangalore Dated: 09–09–2009 ರ ನಡವಳಿ ಪ್ರತಿ ಲಗತ್ತಿಸಿದೆ.

ಆ) ಈ ಸ.ನಂ: 105 ರಲ್ಲಿ ಮೂರು ಶಾಲೆ ಮತ್ತು ಒಂದು ನವೋದಯ ಶಾಲೆ ಇರುವುದು ನಿಜ. ವಲಯ ಅರಣ್ಯಾಧಿಕಾರಿ, ಸೋಮೇಶ್ವರ ಇವರು ತಹಶೀಲ್ದಾರರು ಕಾರ್ಕಳ ಇವರಿಗೆ ಬರೆದ ಪತ್ರ ಸಂ: ಕಸಂ.ಚಾರ 05–061228 ದಿನಾಂಕ: 3–08–2005 ರಲ್ಲಿ ಚಾರಾ ಗ್ರಾಮದ ಸ.ನಂ: 105 ರಲ್ಲಿ ನೀಡಿದ ನಿವೇಶನ ಹಕ್ಕುಪತ್ರಕ್ಕೆ ಆಕ್ಷೇಪಣೆ ಸಲ್ಲಿಸಿ, ಪ್ರಸ್ತಾವಿತ ಮನೆ ನಿವೇಶನ ನೀಡಿದ ಜಮೀನು ಸೋಮೇಶ್ವರ ವನ್ಯಜೀವಿ ವಲಯಕ್ಕೆ ಸೇರಿದ ಚಾರಾ ಬ್ಲಾಕ್ 1 ಮತ್ತು 2 ಆಗಿದ್ದು, ಅರಣ್ಯ ಇಲಾಖೆಯಿಂದ ಮನೆ ನಿವೇಶನ ನೀಡುವುದಕ್ಕೆ ಆಕ್ಷೇಪಣೆ ನೀಡಿರುತ್ತಾರೆ.

ಇ) ಸರಕಾರಿ ಆದೇಶ ಸಂ: ಆರ್.ಡಿ. 113 ಎಲ್‌ಜಿಡಬ್ಲ್ಯೂ 09 (ಯಲ್‌ಸಿ) ದಿನಾಂಕ: 9–09–2009 ರಂತೆ ರಿ.ಪಿ. ನಂ: 16509/2006 ರ ರಿಟ್ ತೀರ್ಮಾನದ ವಿರುದ್ಧ ಸರಕಾರದ ನಿರ್ದೇಶನದ ಮೇರೆಗೆ ರಿಟ್ ಅಪೀಲು ಸಲ್ಲಿಸುವ ಬಗ್ಗೆ ಆದೇಶ ಆದಂತೆ ರಿಟ್ ಅಪೀಲು ನಂ. 1772/10 ರಂತೆ ದಾಖಲಾಗಿ ವಿಚಾರಣೆ ಹಂತದಲ್ಲಿದೆ.

ಈ) ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಹೊರಡಿಸಿರುವ ಅಧಿಸೂಚನೆ ಸಂಖ್ಯೆ: FEE.302.FWL.2011(-V) ದಿನಾಂಕ: 27–12–2011 ರಂತೆ ವನ್ಯಜೀವಿ ವಿಭಾಗದ ಪುನರ್ವಿಂಗಡಣೆ ಮಾಡಲಾಗಿದ್ದು. ವಿಂಗಡಣೆ ಆದೇಶದಲ್ಲಿ ಚಾರಾ ಗ್ರಾಮದ ಸ.ನಂ 105 ರಲ್ಲಿ ಚಾರಾ ಬ್ಲಾಕನ್ನು ಕೈಬಿಟ್ಟು ಆದೇಶವಾಗಿರುತ್ತದೆ. (ಪ್ರತಿ ಲಗತ್ತಿಸಿದೆ) ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ಇವರು ಚಾರ ಬ್ಲಾಕನ್ನು ಈ ಅಧಿಸೂಚನೆಯಿಂದ ಕೈಬಿಟ್ಟು ಆದೇಶ ಮಾಡಿರುವ ಬಗ್ಗೆ ವರದಿ ಸಲ್ಲಿಸಿರುತ್ತಾರೆ. ಈ ಮೊದಲು ಅರಣ್ಯ ಇಲಾಖೆಯವರ ಆಕ್ಷೇಪವಾದ ಮೇರೆಗೆ ವಿತರಿಸಿದ ಹಕ್ಕುಪತ್ರಗಳನ್ನು ರದ್ದು ಪಡಿಸಿದಆದೇಶದವಿರುದ್ದಮಾನ್ಯ ಉಚ್ಚನ್ಯಾಯಾಲಯದಲ್ಲಿ ಅರ್ಜಿದಾರರುಗಳು ಸಲ್ಲಿಸಿದ ರಿಟ್ ಅರ್ಜಿ ಸಂ: 16509/2006 ದಿನಾಂಕ: 10–06–2009 ರ ಆದೇಶದಲ್ಲಿ ಅರ್ಜಿದಾರರ ಪರ ತೀರ್ಮಾನವಾದ ಹಿನ್ನೆಲೆಯಲ್ಲಿ ನಂತರ ಸರಕಾರದಿಂದ ಕಾನೂನುಕೋಶದ ಅಭಿಪ್ರಾಯ ಪಡೆದು ರಿಟ್ ಅಪೀಲು ನಂ: 1772/2010 ರಂತೆ ಸಲ್ಲಿಸಲಾಗಿದೆ. (ಕಾನೂನು ಕೋಶದ ಅಭಿಪ್ರಾಯ ಪ್ರತಿ ಲಗತ್ತಿಸಿದೆ) ಈ ರಿಟ್ ಅಪೀಲು ಸಲ್ಲಿಸಲು ಸರಕಾರದ ಆದೇಶ ಸಂ: RD 113 LGW 09 (LC) Bangalore Dated: 09–09–2009 ರಂತೆ ನಡವಳಿ ಆಗಿರುತ್ತದೆ. (ಪ್ರತಿ ಲಗತ್ತಿಸಿದೆ). ಇದರಂತೆ ಪ್ರಸ್ತುತ ರಿಟ್ ಅಪೀಲು ಸಂ: 1772/2010 ಮಾನ್ಯ ಉಚ್ಚನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. ಉಪಅರಣ್ಯ ಸಂರಕ್ಷಣಾಧಿಕಾರಿ. ಕುದುರೆಮುಖ ವನ್ಯಜೀವಿ ವಿಭಾಗ ಕಾರ್ಕಳ ಇವರ ವರದಿ ಹಾಗೂ ಸರಕಾರದ ಅಧಿಸೂಚನೆಸಂ: FEE 302 FWL 2011-(V) DATED: 27-12-2011 ರಂತೆ ವನ್ಯಜೀವಿ ವಿಭಾಗದ ಪುನರ್ವಿಂಗಡನೆ ಮಾಡಲಾಗಿದ್ದು, ವಿಂಗಡಣೆ ಆದೇಶದಲ್ಲಿ ಚಾರಾ ಗ್ರಾಮದ ಸ.ನಂ: 105 ರಲ್ಲಿ ಚಾರಾ ಬ್ಲಾಕನ್ನು ಕೈಬಿಟ್ಟು ಆದೇಶದಾಗಿರುತ್ತದೆ. ಈ ಬಗ್ಗೆ ಪ್ರಕರಣವನ್ನು ಮಾನ್ಯ ಉಚ್ಚನ್ಯಾಯಾಲಯದಲ್ಲಿ ಮುಂದುವರೆಸುವ ಬಗ್ಗೆ ಅಥವಾ ಹಿಂಪಡೆಯುವ ಬಗ್ಗೆ ನಿರ್ದೇಶನ ಕೋರಿ ಈ ಕಾರ್ಯಾಲಯದ ಪತ್ರ ಸಂ: ಎಲ್ಎನ್ಡಿ. ಹೆಚ್ಎಸ್. 42/2006–07/3730 ದಿನಾಂಕ: 13–09–2012 ರಂತೆ ಸರಕಾರಕ್ಕೆ ಪತ್ರ ಬರೆಯಲಾಗಿದೆ. (ಪತ್ರದ ಪ್ರತಿ ಲಗತ್ತಿಸಿದೆ) ಆದ್ದರಿಂದ ಪ್ರಸ್ತುತ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವ ಅಂಶವನ್ನು ಅವಗಾಹನೆಗೆ ತರಲಾಗಿದೆ.